**ಶಿಕ್ಷಕರ ಮತ್ತು ಪೋಷಕರ ಅಂಕಣ**

## ರಾಷ್ಟ್ರೀಯ ಧ್ಯೇಯ ಚಾರಿತ್ರ್ಯನಿರ್ಮಾಣ

**ಐದು ಉದಾಹರಣೆಗಳು:**

೧. **ಹುಬ್ಬಳ್ಳಿಯ** ದಿನೇಶ್ ಪಾಟೀಲ್ ದಂಪತಿಗಳಿಗೆ ಒಬ್ಬನೇ ಮಗ ದೀಪಕ್‌ನನ್ನು ಇಂಜಿನೀಯರಿಂಗ್ ಶಿಕ್ಷಣಕ್ಕಾಗಿ ಬೆಂಗಳೂರಿಗೆ ಕಳುಹಿಸಿದ್ದರು. ದೀಪಕ್ ತುಂಬ ಬುದ್ಧಿವಂತ. ಆಟೋಟದಲ್ಲೂ ನಿಸ್ಸೀಮ, ವಿಧೇಯ. ಬೆಂಗಳೂರಿನಲ್ಲಿ ಒಂದು ಪ್ರತ್ಯೇಕ ಬಾಡಿಗೆ ಮನೆ ಮಾಡಿ ವಾಸವಾಗಿದ್ದ. ನಿಯಮಿತವಾಗಿ ತಂದೆತಾಯಿಯರಿಗೆ ಫೋನ್ ಮಾಡುತ್ತಿದ್ದ. ಬರಬರುತ್ತ ಫೋನ್ ಕರೆಗಳು ಕಡಮೆಯಾಗತೊಡಗಿದವು. ಆದರೆ ಮಾಡಿದಾಗಲೆಲ್ಲ ತಾನು ತುಂಬ ಯಶಸ್ವಿಯಾಗಿ ಅಧ್ಯಯನ ಮಾಡುತ್ತಿದ್ದೇನೆಂದು ಹೇಳಿಕೊಳ್ಳುತ್ತಿದ್ದ. ಒಂದೂವರೆ ವರ್ಷಗಳು ಕಳೆದವು. ದೀಪಕನ ತಂದೆತಾಯಿಗಳಿಗೆ ಸಿಡಿಲಿನಂತೆ ವಾರ್ತೆಯೊಂದು ತಲುಪಿತು. ದೀಪಕ್‌ನನ್ನು ಕಾಲೇಜಿನಿಂದ ಹೊರಗೆ ಹಾಕಿದ್ದರು. ಪೊಲಿಸರು ಅವನನ್ನು ಬಂಧಿಸಿದ್ದರು. ಅವನು ಒಬ್ಬ ಹುಡುಗಿಯ ಆಭರಣಗಳನ್ನು ಕಳ್ಳತನ ಮಾಡಿದ್ದ. ತಂದೆತಾಯಿಗಳಿಗೆ ನಿಜಸಂಗತಿ ನಿಧಾನವಾಗಿ ತಿಳಿಯಿತು. ಅವನು ವಾಸವಾಗಿದ್ದ ಮನೆಯಲ್ಲಿ ಮಾದಕ ವ್ಯಸನಿಗಳು ಸೇರುತ್ತಿದ್ದರು. ಈ ಚಟ ಬೆಳೆಸಿಕೊಂಡ ದೀಪಕನಿಗೆ ಯಾವಾಗಲೂ ಹಣದ ಕೊರತೆ. ಅದಕ್ಕೆಂದೇ ಅನೈತಿಕ ಮಾರ್ಗ ಹಿಡಿದಿದ್ದ. ತಂದೆತಾಯಿಗಳು ತಲೆಯ ಮೇಲೆ ಕೈಹೊತ್ತು ಕುಳಿತರು. *ಈಗೇನು ತಾನೇ ಮಾಡಬೇಕು? ದೀಪಕನನ್ನು ಸರಿದಾರಿಗೆ ತರುವುದು ಹೇಗೆ?*

೨. **ಹದಿನೆಂಟು** ವರ್ಷದ ಲತಾ ವಿಷವನ್ನು ಸೇವಿಸಿದ್ದಾಳೆ. ಅವಳ ಮನೆಯಲ್ಲಿ ಅವಳಿಗೆ ಯಾವುದಕ್ಕೂ ಕಡಮೆಯಿರಲಿಲ್ಲ. ಆದರೆ, ಮನೆಯಲ್ಲಿ ಅವಳಿಗೆ ಏನೂ ಮನರಂಜನೆ ಸಿಕ್ಕುತ್ತಿಲ್ಲ. ಅದು ಕೆಳಮಧ್ಯಮವರ್ಗದ ಮನೆ. ತಂದೆತಾಯಿ ಇಬ್ಬರೂ ದುಡಿಯುತ್ತಾರೆ. ತನ್ನ ಪೋಷಕರು ತನ್ನನ್ನು ಗಮನಿಸುತ್ತಿಲ್ಲವೆಂದು ಆಕೆಗೆ ಅನ್ನಿಸಿತು. ಈಗ ಅವಳು ರಾಜೇಶನನ್ನು ಭೇಟಿಯಾದಳು. ದೈಹಿಕ ಸಂಪರ್ಕದ ನಂತರ ರಾಜೇಶ್ ಅವಳನ್ನು ತ್ಯಜಿಸಿದ. ಹತಾಶಳಾದ ಅವಳಿಗೆ ಬದುಕುವುದಕ್ಕೆ ಯಾವ ಕಾರಣವೂ ತೋಚುತ್ತಿಲ್ಲ. *ಲತಾ ಏಕೆ ತನ್ನ ಜೀವನದಲ್ಲಿ ಜಾರಿಬಿಟ್ಟಳು?*

೩. **ಸಿದ್ದಪ್ಪನವರು** ಒಳ್ಳೇ ಸ್ಥಿತಿವಂತರು. ಮಕ್ಕಳನ್ನು ಬಹಳ ಚೆನ್ನಾಗಿ ಬೆಳೆಸುತ್ತಿದ್ದಾರೆ. ಮಗ ರಾಹುಲ್ ಈಗ ಆರನೆಯ ತರಗತಿಯಲ್ಲಿ ಓದುತ್ತಿದ್ದಾನೆ. ಅವನ ತಂಗಿ ಪ್ರಾಥಮಿಕ ಶಾಲೆಯಲ್ಲಿದ್ದಾಳೆ. ಆದರೆ ಇತ್ತೀಚೆಗೆ ರಾಹುಲನ ಅಂಕಗಳು ಕಡಮೆಯಾಗುತ್ತಿವೆ; ಅವನಿಗೆ ಶಾಲೆಗೆ ಹೋಗಲು ಆಸಕ್ತಿಯೇ ಇಲ್ಲ. ಕಳೆದ ವಾರದಿಂದ ಅವನು ಶಾಲೆಗೆ ಹೋಗುವುದನ್ನು ಬಿಟ್ಟುಬಿಟ್ಟಿದ್ದಾನೆ. ಸಿದ್ದಪ್ಪನವರು ತಮ್ಮ ಮಗನಿಗೆ ಎಲ್ಲ ರೀತಿಯ ಸೌಲಭ್ಯಗಳನ್ನೂ ಒದಗಿಸಿದ್ದರು. ಕರಾಟೆ, ತಬಲ ಕಲಿಸುತ್ತಿದ್ದರು. ಟ್ಯೂಷನ್ನಿಗೆ ಕೂಡ ಅವನು ಹೋಗುತ್ತಿದ್ದ. ಅವನ ಹವ್ಯಾಸ, ತಿಂಡಿ-ಊಟಗಳಲ್ಲಿ ತುಂಬ ಕಾಳಜಿ ವಹಿಸುತ್ತಿದ್ದರು. *ಆದರೂ ಹೀಗೇಕಾಯಿತು?*

೪. **ಕುಲಕರ್ಣಿಯವರು** ಶ್ರೀಮಂತರು. ತಮ್ಮ ಮಗ ಸಂದೀಪನಿಗೆ ಬೇಕಾದಷ್ಟು ಪಾಕೆಟ್ ಮನಿ ಕೊಡುತ್ತಿದ್ದರು. "ನಾನು ಕಷ್ಟದಲ್ಲಿ ಬೆಳೆದೆ. ನನ್ನ ಮಗ ಸುಖವಾಗಿ ಇರಬೇಕು" ಎನ್ನುತ್ತಿದ್ದರು. ಹತ್ತನೆಯ ತರಗತಿಯಲ್ಲಿ ಓದುತ್ತಿದ್ದ ಸಂದೀಪ ಸಿನೆಮಾಗಳಿಗೆ, ಅದ್ದೂರಿ ಹೋಟೆಲ್‌ಗಳಿಗೆ ಹೋಗತೊಡಗಿದ. ಎಲ್ಲವೂ ಚೆನ್ನಾಗಿಯೇ ನಡೆದಿತ್ತು. ಆದರೆ, ಕುಲಕರ್ಣಿಗಳ ವ್ಯಾಪಾರ ಕುಸಿದುಬಿತ್ತು. ಹಣದ ಅಭಾವದಿಂದ ಸಂದೀಪನ ಪಾಕೆಟ್ ಮನಿಗೂ ಕುತ್ತು ಬಿತ್ತು. ಆದರೆ ಸಂದೀಪ ತನ್ನ ದುಬಾರಿ ಜೀವನಶೈಲಿಯನ್ನು ಬಿಡಲು ತಯಾರಾಗಿರಲಿಲ್ಲ. ಅವನು ತನ್ನ ಮನೆಯಿಂದ ೧೫,೦೦೦ ರೂಪಾಯಿಗಳನ್ನು ಕದ್ದು ಮನೆಬಿಟ್ಟು ಓಡಿಹೋದ. ಅದರಿಂದ ಒಂದು ಪಿಸ್ತೂಲು ಪಡೆದುಕೊಂಡು ಅದನ್ನು ತೋರಿಸಿ, ಕೆಲವು ವ್ಯಾಪಾರಸ್ಥರನ್ನು ದೋಚಲು ಯತ್ನಿಸಿದ. ಆದರೆ ತನ್ನ ಯೋಜನೆಗಳು ಫಲಿಸದೆ ಈಗ ಬಾಲಾಪರಾಧಿಗಳಿಗೆ ಇರುವ ರಿಮ್ಯಾಂಡ್ ಹೋಂನಲ್ಲಿ ಇದ್ದಾನೆ. *ತಮ್ಮ ಮಗನನ್ನು ಸಂತೋಷಗೊಳಿಸಬೇಕೆಂಬ ಕುಲಕರ್ಣಿಯವರ ಯೋಚನೆ ತಪ್ಪೇ? ಅವರು ಎಡವಿದ್ದೆಲ್ಲಿ?*

೫. **ಎರಡು ತಿಂಗಳ** ಹಿಂದೆ, ವಿವೇಕನ ತರಗತಿ ಶಿಕ್ಷಕರು ತಮ್ಮ ಮನೆಯಲ್ಲಿಯೇ ಪಾಠ ಹೇಳಿಕೊಡಲು ಆರಂಭಿಸಿದರು. ಅನೇಕ ವಿದ್ಯಾರ್ಥಿಗಳು ಅದಕ್ಕೆ ಹೋದರು. ಅವರು ಒಳ್ಳೆಯ ಬೋಧಕರು. ಅದಲ್ಲದೆ, ಎರಡನೆ ಪಿ.ಯು.ಸಿ. ಓದುತ್ತಿದ್ದ ವಿವೇಕನ ಎಲ್ಲಾ ಸಹಪಾಠಿಗಳು ಮನೆಪಾಠಕ್ಕೆ ಹೋಗುತ್ತಿದ್ದರು. ಆದರೆ ಮನೆಯಲ್ಲಿಯೇ ತನ್ನ ಪೋಷಕರು ಮಾರ್ಗದರ್ಶನ ನೀಡುತ್ತಿದ್ದರಿಂದ, ವಿವೇಕನಿಗೆ ಮನೆಪಾಠಕ್ಕೆ ಹೋಗುವ ಆವಶ್ಯಕತೆ ಇರಲಿಲ್ಲ. ಆದರೆ ಇತ್ತೀಚೆಗೆ ಕೆಲವು ದಿವಸಗಳಿಂದ ಶಿಕ್ಷಕರು ತರಗತಿಯಲ್ಲಿ ಪಾಠವನ್ನು ವೇಗವಾಗಿ ನಡೆಸುತ್ತಿದ್ದಾರೆ. ಅದು ವಿವೇಕನಿಗೆ ಕಷ್ಟವಾಗುತ್ತಿದೆ. ಆದರೆ ಮನೆಪಾಠಕ್ಕೆ ಹೋಗುತ್ತಿರುವ ಇತರ ವಿದ್ಯಾರ್ಥಿಗಳಿಗೆ ಇದರ ಚಿಂತೆಯಿಲ್ಲ. ವಿವೇಕ ಈ ಸಮಸ್ಯೆಯನ್ನು ಶಿಕ್ಷಕರ ಬಳಿ ಹೇಳಿಕೊಂಡಾಗ, ಅವರು ಸೂಚ್ಯವಾಗಿ ತಾನು ನಡೆಸುತ್ತಿರುವ ಮನೆಪಾಠ ಸೇರುವಂತೆ ಹೇಳಿದರು. ಈಗ ವಿವೇಕ ಮತ್ತು ಅವನ ಪೋಷಕರು ಒತ್ತಡಕ್ಕೆ ಸಿಲುಕಿದ್ದಾರೆ. *ಈ ಸಂದರ್ಭದಲ್ಲಿ ವಿವೇಕ ಏನು ಮಾಡಬೇಕು?*


ಇಂದು ಭಾರತದಲ್ಲಿ ೫೦ ಕೋಟಿಯಷ್ಟು ೨೫ ವರ್ಷಕ್ಕಿಂತ ಕಡಮೆ ವಯಸ್ಸಿನ ಯುವಕರಿದ್ದಾರೆ. ಅವರು ಭಾರತದ ಭವಿಷ್ಯವನ್ನು ರೂಪಿಸುತ್ತಾರೆ. ಆದರೆ ಕಳೆದ ದಶಕದಲ್ಲಿ, ಸಮಾಜದ ಬಹು ಮುಖ್ಯ ಅಂಗವಾದ ಯುವಕರ ಮನೋವೈಜ್ಞಾನಿಕ ಸಮಸ್ಯೆಗಳು ಅಧಿಕವಾಗುತ್ತಲೇ ಇವೆ. ಮೇಲಿನ ಉದಾಹರಣೆಗಳು ಒಂದು ಬಗೆಯ ಸಂಕೀರ್ಣ ಪರಿಸ್ಥಿತಿಯನ್ನು ಬಿಂಬಿಸುತ್ತವೆ. ಅದೆಂದರೆ – ನಮ್ಮ ದೇಶದ ಅತ್ಯಂತ ಅಮೂಲ್ಯ ಸಂಪನ್ಮೂಲವಾದ ಮೌಲ್ಯಗಳ ಅಧಃಪತನ. ಅದಕ್ಕೆ ಕಾರಣ, ಮಗುವಿನ ಮೇಲೆ ಆಗುವ ಹಲವು ಬಗೆಯ ಪ್ರಭಾವಗಳು. ಅವು ಯಾವುವು?

### ಸಮಾಜ ಬೀರುವ ಪರಿಣಾಮಗಳು

ನಮ್ಮದು ಬಹಳ ಪುರಾತನ ರಾಷ್ಟ್ರ. ಇತ್ತೀಚೆಗೆ ತಾಂತ್ರಿಕತೆ ಮತ್ತು ಆಧುನಿಕ ಬೆಳವಣಿಗೆಗಳಾದ ಜಾಗತೀಕರಣ ಮತ್ತು ಉದಾರೀಕರಣಗಳು ನಮ್ಮ ಸಮಾಜದಲ್ಲಿ ಸಾವಿರಾರು ವರ್ಷಗಳ ಕಾಲ ಪ್ರಚಲಿತವಾಗಿರುವ ಮೌಲ್ಯಗಳನ್ನು ತಿರುಚುತ್ತಿವೆ. ಸಾಂಪ್ರದಾಯಿಕ ಮೌಲ್ಯಗಳು ಮತ್ತು ಆಧುನಿಕತೆಯ ಮೌಲ್ಯಗಳ ನಡುವಣ ಘರ್ಷಣೆಯಲ್ಲಿ ನಮ್ಮ ಯುವಜನಾಂಗ ಸಿಲುಕಿಬಿದ್ದಿದ್ದಾರೆ. ಇದು ಜೀವನದ ಬಗ್ಗೆ ನಮ್ಮ ಮನೋಭಾವ ಮತ್ತು ಸಾಮಾಜಿಕ ಸಂಬಂಧಗಳಲ್ಲಿ ವೈಪರೀತ್ಯಗಳನ್ನು ಉಂಟುಮಾಡುತ್ತಿವೆ. ಇದರಿಂದ ನಮ್ಮ ಸಾಂಪ್ರದಾಯಿಕ ನೈತಿಕ ಮೌಲ್ಯಗಳು ಮತ್ತು ಸಂಸ್ಕೃತಿಗೆ ಧಕ್ಕೆ ಬಂದಿದೆ. ಇದರಿಂದಾಗಿ ಅಪರಾಧಗಳು, ಹಿಂಸೆ ಹೆಚ್ಚಾಗುತ್ತಿವೆ. ಇದಕ್ಕೆ ಇನ್ನೊಂದು ಕಾರಣವೆಂದರೆ, ಆಧುನಿಕ ಸಮಾಜವು ವ್ಯಕ್ತಿಯೊಬ್ಬನಿಗೆ ತುಂಬ ಸ್ವಾತಂತ್ರ್ಯವನ್ನು ನೀಡಿರುವುದು. ಇದರಿಂದ ಅವಕಾಶಗಳು ಹೆಚ್ಚುತ್ತಿವೆಯೇ ಹೊರತು. ಯಾವ ಅವಕಾಶಗಳನ್ನು ಆಯ್ಕೆ ಮಾಡಿಕೊಳ್ಳಬೇಕು ಎಂಬ ವಿಷಯದಲ್ಲಿ ವಿವೇಕ ಕಡಿಮೆಯಾಗುತ್ತಿದೆ. ಆಯ್ಕೆಯ ಜೊತೆಯಲ್ಲಿ ಜವಾಬ್ದಾರಿಯೂ ಇದೆ ಎಂಬ ಪ್ರಜ್ಞೆ ಇಲ್ಲದಿರುವುದೇ ಇದಕ್ಕೆ ಕಾರಣ. ೧೯೬೬ ರಲ್ಲಿ ಶ್ರೀ ಕೊಠಾರಿಯವರು ಅಧ್ಯಕ್ಷತೆ ವಹಿಸಿದ್ದ ಶಿಕ್ಷಣ ಆಯೋಗ ಹೀಗೆ ಹೇಳುತ್ತದೆ: "ಆಧುನಿಕತೆಯು ಸಂಪದ್ಭರಿತವಾದ ಸಮಾಜವನ್ನು ಸೃಷ್ಟಿಸಿ, ವಿಪುಲ ಅವಕಾಶಗಳನ್ನು ನೀಡಿದೆ. ಈ ಸ್ವಾತಂತ್ರ್ಯದ ಜೊತೆಗೆ ಸಾಮಾಜಿಕ ಜವಾಬ್ದಾರಿ ಮತ್ತು ನೈತಿಕ ಹಾಗೂ ಆಧ್ಯಾತ್ಮಿಕ ಮೌಲ್ಯಗಳ ಅರಿವೂ ಕೂಡ ಆವಶ್ಯಕ."

### ಮಾಧ್ಯಮ ಬೀರುವ ಪ್ರಭಾವಗಳು

ಈಗ ಸರ್ವವ್ಯಾಪಿಯಾಗಿರುವ ಟಿ.ವಿ., ಪತ್ರಿಕೆ ಮುಂತಾದ ಮಾಧ್ಯಮಗಳ ದುರುಪಯೋಗಕ್ಕೆ ಬೇಕಾದಷ್ಟು ಅವಕಾಶ ಇದ್ದು, ಅದು ಆತಂಕಕ್ಕೆ ಎಡೆ ಮಾಡಿಕೊಟ್ಟಿದೆ. ಪ್ರತಿದಿನವೂ ಮಾಹಿತಿ ಜಾಲಗಳು ಅನೇಕ ಕೃತಕ ಭಾವನೆಗಳನ್ನು ಮತ್ತು ಪಾಶ್ಚಾತ್ಯ ಸಾಂಸ್ಕೃತಿಕ ಮೌಲ್ಯಗಳನ್ನು ಮಕ್ಕಳ ಮೇಲೆ ಹೇರುತ್ತಿವೆ. ಇವುಗಳೆಲ್ಲ ಬಹುತೇಕ ವಾಣಿಜ್ಯ ಜಾಹೀರಾತುಗಳ ರೂಪದಲ್ಲಿ ಇರುತ್ತವೆ. ಇವು ಮಕ್ಕಳು ಮತ್ತು ಯುವಕರಲ್ಲಿ ಭೋಗ ಪ್ರವೃತ್ತಿಯನ್ನೂ ಕೃತಕ ವಿಷಯತೃಷ್ಣೆಯನ್ನೂ ಉಂಟುಮಾಡುತ್ತವೆ. ಅದಲ್ಲದೆ, ತಮ್ಮ ವ್ಯಕ್ತಿತ್ವದ ಬಗ್ಗೆ ಅವಾಸ್ತವಿಕವಾದ ಧೋರಣೆಯನ್ನು ಬೆಳೆಸಿಕೊಳ್ಳುವಂತೆ ಮಾಡುತ್ತದೆ. ತಾವು ಬೇರೆಯವರಿಗೆ ಹೇಗೆ ಕಾಣಿಸಿಕೊಳ್ಳುತ್ತೇವೆ, ಯಾವ ಬೆಲೆಬಾಳುವ ವಸ್ತುಗಳನ್ನು ಹೊಂದಿದ್ದೇವೆ– ಇವುಗಳ ಮೇಲೆ ತಮ್ಮ ವ್ಯಕ್ತಿತ್ವವು ಅವಲಂಬಿತವಾಗಿದೆ ಎಂಬ ತಪ್ಪು ಅಭಿಪ್ರಾಯವನ್ನು ಅವು ಮೂಡಿಸುತ್ತವೆ. ಸದಭಿರುಚಿಯ ಸೌಂದರ್ಯ ಪ್ರಜ್ಞೆಯ ಬದಲು, ವಿಕೃತ ಭಾವನೆಗಳನ್ನು ಹರಡುತ್ತವೆ. ವೃತ್ತಪತ್ರಿಕೆಗಳು ಹಿಂದೆ ಮಾಡುತ್ತಿದ್ದಂತೆ, ರಾಷ್ಟ್ರೀಯ ಭಾವನೆಗಳನ್ನು ಹರಡುವ ಬದಲು, ತಮ್ಮ ಗಾಂಭೀರ್ಯವನ್ನು ಕಳೆದುಕೊಂಡು ರಾಜಕಾರಣ, ಅಪರಾಧಗಳು, ಭ್ರಷ್ಟಾಚಾರ ಮತ್ತು ಉದ್ರೇಕಕಾರಿ ವಾರ್ತೆಗಳ ಮೇಲೆ ತಮ್ಮ ಗಮನವನ್ನು ಹರಿಸಿವೆ. ವಿದ್ಯಾರ್ಥಿಗಳು ತಮ್ಮ ಇಂದ್ರಿಯಗಳ ನಿಯಂತ್ರಣವನ್ನು ರೂಢಿಸಿಕೊಂಡು, ಅಧ್ಯಯನದಲ್ಲಿ ಏಕಾಗ್ರತೆಯನ್ನು ಸಾಧಿಸಿಕೊಳ್ಳಬೇಕಾದ ಸಮಯದಲ್ಲಿ ಮಾಧ್ಯಮಗಳು ಅವರ ಮೇಲೆ ದುಷ್ಪರಿಣಾಮ ಬೀರುತ್ತಿರುವುದು ವಿಷಾದನೀಯ.




### ಮನೆ ಬೀರುವ ಪ್ರಭಾವಗಳು

ಮಗುವಿನ ಆಧ್ಯಾತ್ಮಿಕ, ನೈತಿಕ ಮತ್ತು ಸಾಂಸ್ಕೃತಿಕ ಬೆಳವಣಿಗೆ ಆರಂಭಗೊಳ್ಳುವುದು ಮನೆಯಲ್ಲಿ. ಇದರ ಎರಡು ಅಂಶಗಳೆಂದರೆ, ಮನೆಯ ವಾತಾವರಣ ಮತ್ತು ತಂದೆತಾಯಿಗಳ ಗಮನ. ಹಿಂದೆ ಕುಲಧರ್ಮದ ಕಲ್ಪನೆ ಇತ್ತು. ಅದರ ಮೂಲಕ ಮಗು ಕುಟುಂಬವು ತಲೆತಲಾಂತರದಿಂದ ಉಳಿಸಿಕೊಂಡು ಬಂದಿದ್ದ ಸಂಪ್ರದಾಯಗಳನ್ನು ಮತ್ತು ಮೌಲ್ಯಗಳನ್ನು ಕಲಿಯುತ್ತಿತ್ತು. ಇದು ಕುಟುಂಬದ ಸದಸ್ಯರೆಲ್ಲರಿಗೂ ಅಭಿಮಾನ ಮತ್ತು ಆತ್ಮವಿಶ್ವಾಸಗಳನ್ನು, ವೈಯಕ್ತಿಕ ಮತ್ತು ಸಾಮಾಜಿಕ ನಡತೆಗಳಲ್ಲಿ ಮಾರ್ಗದರ್ಶನವನ್ನೂ ಕೊಡುತ್ತಿತ್ತು. ತನ್ನ ಕೆಟ್ಟ ನಡತೆಯಿಂದ ಕುಟುಂಬಕ್ಕೆ ಅವಮಾನವಾಗುವುದೆಂಬ ಪ್ರಜ್ಞೆ ಮಗುವಿನಲ್ಲಿ ಮೂಡುತ್ತಿತ್ತು. ಅದಲ್ಲದೆ ಒಟ್ಟು ಕುಟುಂಬಗಳಲ್ಲಿ, ಮಗುವಿಗೆ ಹಿರಿಯ ಸದಸ್ಯರ ಒತ್ತಾಸೆ, ಸಲಹೆಗಳು ದೊರಕುತ್ತಿದ್ದವು. ಪರಂಪರೆಯ ಜ್ಞಾನ ಮತ್ತು ಪುರಾತನ ಮೌಲ್ಯಗಳು ಮಗುವಿಗೆ ಲಭ್ಯವಾಗುತ್ತಿದ್ದವು. ಆದರೀಗ ಪಾಶ್ಚಾತ್ಯ ರೀತಿಯ ಜೀವನಶೈಲಿಯನ್ನು ಅನುಕರಿಸಹೊರಟು, ಹಣಗಳಿಕೆಯೇ ತಂದೆತಾಯಿಗಳ ದಿನದ ಬಹು ಸಮಯವನ್ನು ತಿಂದುಹಾಕುತ್ತಿದೆ. ಗಳಿಕೆ–ಖರ್ಚು–ಮತ್ತೆ ಗಳಿಕೆ , ಈ ವಿಷವರ್ತುಲದಲ್ಲಿ ಸಿಕ್ಕಿದ ತಂದೆತಾಯಿಯರಿಗೆ ತಾವು ತಮ್ಮ ಮಕ್ಕಳಿಗೆ ನೀಡಬೇಕಾದ 'ಅಮೂಲ್ಯ ಸಮಯ' ಸಿಗುತ್ತಿಲ್ಲ. ಮಗುವಿನ ಭೌತಿಕ ಆವಶ್ಯಕತೆಗಳನ್ನಷ್ಟೇ ಪೂರೈಸುವಲ್ಲಿ ತೊಡಗಿರುವ ಅವರು, ಮಾನಸಿಕ, ಭಾವನಾತ್ಮಕ ಮತ್ತು ಬೌದ್ಧಿಕ ಆವಶ್ಯಕತೆಗಳ ಬಗ್ಗೆ ಗಮನ ಹರಿಸುತ್ತಿಲ್ಲ. ಅನೇಕ ವೇಳೆ ಒಂಟಿಯಾಗುವ ಮಗು ಜಾಗರೂಕತೆಯ ಪಾಲನೆ ಮತ್ತು ಮಾರ್ಗದರ್ಶನಗಳಿಂದ ವಂಚಿತವಾಗುತ್ತಿದೆ.

### ಶಾಲೆ ಬೀರುವ ಪ್ರಭಾವಗಳು

ಶಾಲೆಯ ಪರಿಸರದಲ್ಲಿರುವ ಮೂರು ಮೂಲಗಳಿಂದ ಮಗು ಮೌಲ್ಯಗಳನ್ನು ಪಡೆದುಕೊಳ್ಳುತ್ತದೆ. ೧. ಶಿಕ್ಷಕ ೨.ಸ್ನೇಹಿತರು ೩. ವಿದ್ಯಾಭ್ಯಾಸ ಡಾ. ರಾಧಾಕೃಷ್ಣನ್ "ಶಿಕ್ಷಕರಾಗುವವರು ದೇಶದ ಅತಿ ಶ್ರೇಷ್ಠ ಮೇಧಾವಿಗಳಾಗಿರಬೇಕು" ಎಂದು ಹೇಳುತ್ತಿದ್ದರು. **ಶಿಕ್ಷಕರು** "ನೀರವ ರಾಷ್ಟ್ರ ನಿರ್ಮಾಪಕರು." ಒಬ್ಬ ಆದರ್ಶ ಶಿಕ್ಷಕ ತನ್ನ ವಿಷಯದ ಬಗ್ಗೆ ತೀವ್ರ ಆಸಕ್ತಿಯನ್ನು ಬೆಳೆಸಿಕೊಂಡಿರುತ್ತಾನೆ. ಅದೇ ರೀತಿ, ಯುವ ಮನಸ್ಸುಗಳನ್ನು ಕಲಿಯುವಂತೆ ಪ್ರಚೋದಿಸುವ ಕಲೆಯನ್ನೂ ರೂಢಿಸಿಕೊಂಡಿರುತ್ತಾನೆ. ಅದಲ್ಲದೆ, ವಿದ್ಯಾರ್ಥಿಗಳ ಯೋಗಕ್ಷೇಮದ ಬಗ್ಗೆ ಕಳಕಳಿಯನ್ನು ಹೊಂದಿರುತ್ತಾನೆ. 'ಕಲಿಯುವುದು–ಕಲಿಸುವುದು' – ಇವೆರಡೂ ತಪಸ್ಸು ಎಂದು ಉಪನಿಷತ್ತು ಹೇಳುತ್ತದೆ. **ವಿದ್ಯಾಭ್ಯಾಸದ** ಬಗ್ಗೆ ಹೇಳುವುದಾದರೆ, ಒಂದು ದೇಶದ ಸಾಂಸ್ಕೃತಿಕ ಪರಂಪರೆಯನ್ನು ಮುಂದಿನ ಪೀಳಿಗೆಗೆ ತಲುಪಿಸುವುದೇ ಅದರ ಗುರಿಯಾಗಿರಬೇಕು. ನಮ್ಮ ಹಿಂದಿನ ಗುರುಕುಲಗಳಲ್ಲಿ, ಒಬ್ಬ ವ್ಯಕ್ತಿಗೆ ಮತ್ತು ಸಮಾಜಕ್ಕೆ ಬೇಕಾದ ಮೌಲ್ಯಗಳಲ್ಲಿ ತರಬೇತಿ ಸಿಗುತ್ತಿತ್ತು. ಅದಲ್ಲದೆ, ನೈತಿಕತೆಗಿಂತಲೂ ಉನ್ನತವಾದ ಆಧ್ಯಾತ್ಮಿಕ ಧ್ಯೇಯದ ಪರಿಚಯವೂ ಲಭಿಸುತ್ತಿತ್ತು. ಆದರೆ ಆಧುನಿಕ ಶಿಕ್ಷಣ ಪದ್ಧತಿಯು ಬ್ರಿಟಿಷರ ಕೊಡುಗೆಯಾಗಿದ್ದು, ಅದರಲ್ಲಿ ಪರಂಪರಾಗತ ಆಧ್ಯಾತ್ಮಿಕ ಮತ್ತು ಸಾಂಸ್ಕೃತಿಕ ಮೌಲ್ಯಗಳಿಗೆ ಸ್ಥಾನವಿಲ್ಲ. ಹೀಗಾಗಿ, ನಮ್ಮ ದೇಶದ ಜನರ ಸಮಸ್ಯೆಗಳನ್ನು ಅದು ಪರಿಹರಿಸುತ್ತಿಲ್ಲ. ಅಲ್ಲದೆ, ಶಿಕ್ಷಣ ಕೃತಕ ಸ್ಪರ್ಧೆಯ ಮಾನಸಿಕ ಭಾರವನ್ನು ಮಕ್ಕಳ ಮೇಲೆ ಅನಾವಶ್ಯಕವಾಗಿ ಹೊರೆಸಿದೆ. ಕೇವಲ ಮಾಹಿತಿಗಳ ಸಂವಹನ ಮಾತ್ರ ಶಿಕ್ಷಣವೆನಿಸಿ, ಹೆಚ್ಚಿನ ಅಂಕಗಳೇ ವಿದ್ಯಾರ್ಥಿಯ ಏಕಮಾತ್ರ ಗುರಿಯಾಗಿದೆ.

**ಉದಾಹರಣೆಗಳಲ್ಲಿ ನೋಡಿದ ಮಕ್ಕಳ ಅಸಹಜ ವರ್ತನೆಗೆ ಈಗ ನಾವು ಕಾರಣಗಳನ್ನು ಕಂಡುಕೊಳ್ಳಬಹುದು. ಇದಕ್ಕೆ ಪರಿಹಾರ ಮಕ್ಕಳ ಆಲೋಚನೆ, ಭಾವನೆ ಮತ್ತು ಮಾನವೀಯ ಸಂಬಂಧಗಳ ಸಮರ್ಪಕ ನಿರ್ವಹಣೆ. (ಮುಂದಿನ ತಿಂಗಳು:** *ಮೌಲ್ಯಗಳ ಸಂವಹನದಲ್ಲಿ ತೊಡಕುಗಳು – ಕಾರಣ ಮತ್ತು ಪರಿಹಾರ*) **(ಕೃಪೆ: Parents and Teachers in Value Education, Publisher: Ramakrishna Mission, Belur Math)**